ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೆರಡನೆಯ ಅಧಿವೇಶನ

ಬುಧವಾರ, ದಿನಾಂಕ: 09ನೇ ಡಿಸೆಂಬರ್, 2020

ಫಸಲ್ ಭೀಮಾ ಯೋಜನೆ ಬಗ್ಗೆ

ಶ್ರೀ ಕೆ.ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-

181 (310) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಫಸಲ್ ಭೀಮಾ ಯೋಜನೆಯು ನಿರೀಕ್ಷಿತ ಮಟ್ಟದಲ್ಲಿ ಯಶಸ್ವಿ ಕಾಣದಿರುವುದು ಸರ್ಕಾರದ ಗಮನದಲ್ಲಿದೆಯೇ ; (ವಿವರ ಒದಗಿಸುವುದು)

(ಆ) ಫಸಲ್ ಭೀಮಾ ಯೋಜನೆಯಲ್ಲಿ ರೈತರಿಗಿಂತ ವಿಮಾ ಕಂಪನಿಗಳೇ ಹೆಚ್ಚು ಲಾಭ ಮಾಡಿಕೊಂಡಿದ್ದು, ಯೋಜನೆಯ ಕ್ಲೇಮ್ ನೀಡಲು ಕಠಿಣ ಷರತ್ತುಗಳು, ತಾಂತ್ರಿಕ, ಸಮಸ್ಯೆ, ಜಾಗೃತಿಯ ಕೊರತೆ ಮತ್ತು ಅಡ್ಡಿ ಆತಂಕಗಳ ಕಾರಣಗಳಿಂದ ಸದರಿ ಯೋಜನೆಯು ದುರ್ಬಲವಾಗಿದ್ದು, ನಿರೀಕ್ಷಿತ ಯಶಸ್ಸಿನ ಮಟ್ಟವನ್ನು ತಲುಪದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಸದರಿ ಯೋಜನೆಯನ್ನು ಯಶಸ್ವಿಗೊಳಿಸಲು /ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ಈ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು)